# ಸೂತ್ರಧಾರ

ಜೀವನದಲ್ಲಿ ನಮಗೆ ಅನೇಕ ಸಮಸ್ಯೆಗಳು ಬರುತ್ತಲೇ ಇರುತ್ತವೆ. ಪೂಜೆಗಳನ್ನು ಮಾಡಿದರೂ, ಧ್ಯಾನವನ್ನು ಮಾಡಿದರೂ ಅಥವಾ ಇತರ ಯಾವುದೇ ಸಾಧನೆಗಳನ್ನು ಆಚರಿಸಿದರೂ ಸಮಸ್ಯೆಗಳು ಬರುತ್ತಲೇ ಇರುತ್ತವೆ. ಆದ್ದರಿಂದ ಇಲ್ಲಿ ನಾವು ಅರ್ಥಮಾಡಿಕೊಳ್ಳಬೇಕಾದ ವಿಷಯವೇನೆಂದರೆ, ಕಷ್ಟಗಳು ಪ್ರತಿಯೊಬ್ಬರಿಗೂ ಇರುತ್ತವೆ ಆದರೆ ವ್ಯತ್ಯಾಸವೇನೆಂದರೆ, ಅವರವರ ಸ್ಥಿತಿಗೆ ತಕ್ಕಂತೆ ಅವರಿಗೆ ಕಷ್ಟ ಸುಖಗಳು ಬರುತ್ತಿರುತ್ತವೆ. ನಮ್ಮ ಸಮಸ್ಯೆಗಳಿಗೆ ಪರಿಹಾರವನ್ನು ಬಾಹ್ಯದಲ್ಲಿ ಹುಡುಕಿದರೆ ಜೀವನವು ದುಃಖಕರವಾಗುತ್ತದೆ. ಅದೇ ಅಂತರ್ಮುಖಿಯಾಗಿ ನಮ್ಮೊಳಗೆ ಪರಿಹಾರವನ್ನು ಹುಡುಕಿದರೆ ಜೀವನವು ಅತ್ಯದ್ಭುತವಾಗಿರುತ್ತದೆ. ಬಹಿರ್ಮುಖದ ಪ್ರಯತ್ನವನ್ನು ಅತಿಕ್ರಮಿಸಿ ಅಂತರ್ಮುಖದ ಪ್ರಯತ್ನದಲ್ಲಿ ತೊಡಗಿದರೆ ಸಮಸ್ಯೆಗಳಿಗೆ ಸುಲಭವಾದ ಪರಿಹಾರಗಳು ಲಭಿಸುತ್ತವೆ.

ನಾವು ಹುಟ್ಟಿದಾಗಲೇ ಪರಮಾತ್ಮನು, ನಮ್ಮ ವಿಧಿಲಿಖಿತವನ್ನು ಬರೆದಿದ್ದಾನೆ. ಅದೇನೆಂದರೆ, ತನ್ನ ಮಕ್ಕಳು ತನ್ನಂತೆ ಆಗಬೇಕೆಂದು. ಎಂದರೆ "ಅಹಂ ಬ್ರಹ್ಮಾಸ್ಮಿ" ಎಂದು, ನಾನೇ ದೇವರೆಂದು ಅನುಭವ ಪೂರ್ವಕವಾಗಿ ತಿಳಿದುಕೊಳ್ಳಬೇಕು. ಎಂದರೆ, ತಮೋಗುಣ, ರಜೋಗುಣ, ಸತ್ವ ಗುಣ, ಶುದ್ಧ ಸಾತ್ವಿಕ ಮತ್ತು ನಿರ್ಗುಣವೆನ್ನುವ 5 ಕ್ಲಾಸ್ ಗಳನ್ನು ಖಂಡಿತವಾಗಿ ಎಲ್ಲರೂ ಓದಬೇಕೆಂದು, ಇವುಗಳಿಗೆ ಸಂಬಂಧಿಸಿದ ಕಷ್ಟ-ಸುಖಗಳು ನಮ್ಮ ಜೀವನದಲ್ಲಿ ಖಂಡಿತವಾಗಿ ಬರುತ್ತವೆಂದು ಗ್ರಹಿಸಬೇಕು. ಪರಮಾತ್ಮನೆಂದರೆ ಯಾರು? ನಮ್ಮನ್ನೆಲ್ಲಾ ಹುಟ್ಟಿಸಿದವನು ಮತ್ತು ನಮ್ಮ ನಿಜವಾದ ತಂದೆ. ಈ ಮುಂಚೆ ದೇವಸ್ಥಾನಕ್ಕೆ ಹೋದರೆ ಪರಿಹಾರಗಳು ಬರುತ್ತಿದ್ದವು. ಏಕೆಂದರೆ ಆಗ ನಾವು ಚಿಕ್ಕ ಮಕ್ಕಳಾಗಿದ್ದೆವು. ಆದರೆ ಈಗ ಆ ಪರಿಹಾರಗಳು ಸಿಗುತ್ತಿಲ್ಲ ಏಕೆಂದರೆ ನಾವು ಬೆಳೆದಿದ್ದೇವೆ. ಈಗ ನಮ್ಮಷ್ಟಕ್ಕೆ ನಾವೇ ನಮ್ಮಲ್ಲಿಯ ದೇವರ ಸಹಾಯದಿಂದ ಪ್ರತಿಯೊಂದನ್ನೂ ಸಾಧಿಸಲ್ಪಡುವ ಸ್ಥಿತಿಯನ್ನು ತಲುಪಿದ್ದೇವೆ.

ಇದನ್ನು ನಾನು ಉದಾಹರಣೆಯ ಮೂಲಕ ವಿವರಿಸುತ್ತೇನೆ. ನನಗೊಂದು ವೆಬ್ ಸೈಟ್ ಇದೆ, ಅದಕ್ಕೆ ನಾನು 10000 ರೂಪಾಯಿಗಳನ್ನು ಪಾವತಿಸಿದ್ದೇನೆ. ಅದಕ್ಕೂ ಮುಂಚೆ 5 ವರ್ಷಕ್ಕೆ 5000 ರೂಪಾಯಿಗಳನ್ನು ಪಾವತಿಸಿದ್ದೆನು. ಸರ್ವೀಸ್ ಚೆನ್ನಾಗಿದೆಯೆಂದು 10 ವರ್ಷಕ್ಕೆ 10000 ರೂಪಾಯಿಗಳನ್ನು ಪಾವತಿಸಿದೆನು. 10 ವರ್ಷಗಳವರೆಗೆ ಸರ್ವೀಸ್ ಕೊಡುತ್ತೇವೆಂದು ಹೇಳಿ 2 ವರ್ಷದವರೆಗೆ ಅವರು ಸೇವೆಯನ್ನು ಚೆನ್ನಾಗಿಯೇ ನೀಡಿದರು. ಆದರೆ ಈ ನಡುವೆ ಅವರು ತಮ್ಮ ಕಂಪನಿಯನ್ನು ಮುಚ್ಚಿ ಬಿಟ್ಟರು. ಅವರಿಗೆ ಫೋನ್ ಮಾಡಿದರೆ ಯಾರೂ ನನ್ನ ಕರೆಯನ್ನು ಸ್ವೀಕರಿಸಲಿಲ್ಲ. ನನಗೆ 10000 ರೂಪಾಯಿಗಳ ನಷ್ಟವಾಯಿತು, ಈಗ ನಾನೇನು ಮಾಡಬೇಕು?

ನನಗೆ ತುಂಬಾ ಕೋಪ ಬಂದಿತು. ಏಕೆಂದರೆ ನಾನು ಫಿಕ್ಸ್ ಆಗಿದ್ದೆ, ಎಂದರೆ 10 ವರ್ಷಗಳವರೆಗೆ ನನ್ನ ವೆಬ್ ಸೈಟ್ ನನ್ನ ಸ್ವಂತದ್ದಾಯಿತು ಎಂದುಕೊಂಡಿದ್ದೆ. ಯಾವಾಗ ನಾವು ಒಂದಕ್ಕೆ ಫಿಕ್ಸ್ ಆಗುತ್ತೇವೆಯೋ ಆಗ ಅದು ಸಂಭವಿಸದಿದ್ದರೆ ನಮಗೆ ಖಂಡಿತ ನೋವುಂಟಾಗುತ್ತದೆ. ಆಗ ನಾನು ನನ್ನೊಳಗೆ ಅವರನ್ನು ಬೈಯ್ದುಕೊಳ್ಳುತ್ತಾ, "ಮಾರ್ಗದರ್ಶಕ" ಎನ್ನುವ ಟಾಪಿಕ್ ನಲ್ಲಿ ತಿಳಿಸಿದ ರೀತಿಯಲ್ಲಿ ಸಾಧನೆಯನ್ನು ಪ್ರಾರಂಭಿಸಿದೆನು.

ಆಗ ನಾನು ದೇವರನ್ನು, "ನಾನು 10000 ರೂಪಾಯಿಗಳನ್ನು ಏಕೆ ನಷ್ಟ ಮಾಡಿಕೊಂಡೆನು, ನೀನು ಹೇಳಿದೆಯೆಂದು ತಾನೇ ನಾನು ವೆಬ್ ಸೈಟ್ ನ್ನು ಖರೀದಿಸಿದೆ, ಹಾಗಾದರೆ ಏಕೆ ನಷ್ಟವಾಯಿತು ಮತ್ತು ಇದಕ್ಕೆ ಪರಿಹಾರವೇನು" ಎಂದು. "ಈಗಲೂ ಅವರಿಂದ ನಿನ್ನ ಹಣವನ್ನು ಹಿಂಪಡೆಯಲು ಸಾಧ್ಯ, ಅವರಿಗೆ ಆಲೋಚನೆಯೊಂದನ್ನು ಕಳುಹಿಸಿ, ಶಕ್ತಿಯನ್ನು ನೀಡಿ ಅವರಿಂದ ನಿನ್ನ 10000 ರೂಪಾಯಿಗಳನ್ನು ಮರಳಿ

ಪಡೆಯಬಹುದು. ಆದರೆ ಆ ಕಂಪನಿಯವರೇ ಕೋಟಿಗಟ್ಟಲೆ ರೂಪಾಯಿಗಳ ನಷ್ಟವನ್ನು ಅನುಭವಿಸಿದ್ದಾರೆ, ಆ ನಷ್ಟದಿಂದಾಗಿ ಅವರು ಚೇತರಿಸಿಕೊಳ್ಳಬೇಕೆಂದರೆ ತುಂಬಾ ಕಷ್ಟ. ಆದ್ದರಿಂದ ಅವರನ್ನು ಕ್ಷಮಿಸಿಬಿಡು ಮತ್ತು ಅವರ ಸ್ಥಿತಿಯನ್ನು ಅರ್ಥಮಾಡಿಕೋ. ಮೊದಲು ನೀನು ಪ್ರಶಾಂತ ಸ್ಥಿತಿಗೆ ಬರಬೇಕು. ನೀನು ನಷ್ಟ ಹೊಂದಿದ ನಿನ್ನ 10000 ರೂಪಾಯಿಗಳನ್ನು ನಾನು ಇನ್ನಿತರ ಮಾರ್ಗಗಳ ಮೂಲಕ ನಿನಗೆ ದೊರಕುವಂತೆ ಸಹಾಯ ಮಾಡುತ್ತೇನೆ" ಎಂದು ಅಂತರಂಗದಲ್ಲಿ ನನಗೆ ದೈವದಿಂದ ಸಂದೇಶ ಬಂದಿತು. ನಂತರ ನಾನು ಊಹಿಸದ ರೀತಿಯಲ್ಲಿ ಒಬ್ಬ ಮಹಿಳೆ ನನ್ನ ಹತ್ತಿರ ಬಂದು ತನ್ನ ಸಮಸ್ಯೆಗಳಿಗೆ ಕೌನ್ಸೆಲಿಂಗ್ ನ್ನು ಪಡೆದುಕೊಂಡು 10000 ರೂಪಾಯಿಗಳನ್ನು ನೀಡಿದಳು.

ಅದೇ ರೀತಿ ನನ್ನ ಶಿಷ್ಯನೊಬ್ಬನು ನನಗೆ App ಮಾಡಿಕೊಡುತ್ತೇನೆಂದು ಹೇಳಿ ಉಚಿತವಾಗಿ ಧರ್ಮಂ ಎನ್ನುವ app ನ್ನು ತಯಾರಿಸಿ ಕೊಟ್ಟನು. ಇದರ ಅರ್ಥ, ವೆಬ್ ಸೈಟ್ ನ ಅವಶ್ಯಕತೆಯಿಲ್ಲದೇ ನನಗೆ ಧರ್ಮಂ app ದೊರಕಿತು. ಆನಂತರ ಅವನು darmam.com ಎನ್ನುವ website ನ್ನು ಸಹ ತಯಾರಿಸಿ ಕೊಟ್ಟನು.

ಹಾಗೆಯೇ ಹಣಕ್ಕಾಗಿ ಮೋಸಗೊಳಿಸುವವರನ್ನು ಸಹ ಅಂತರಂಗದಿಂದ ಸ್ವೀಕರಿಸಿದ್ದೇನೆ. ವಿಪರ್ಯಾಸವೆಂದರೆ ನಾನು 15 ಲಕ್ಷದಲ್ಲಿ Double Bed Room Flat ಖರೀದಿಸಿದೆನು. ನನ್ನ ಹತ್ತಿರ ಕೇವಲ 2 ಲಕ್ಷ ಮಾತ್ರ ಇದ್ದರೂ ಸಹ, ನನ್ನ ಶಿಷ್ಯರ ಸಹಾಯದಿಂದ ಫ್ಲ್ಯಾಟ್ ನ್ನು ಖರೀದಿಸಿದೆನು. ಉಳಿದ ಹಣವು ನನ್ನಲ್ಲಿ ಕೇವಲ ಎರಡೇ ದಿನದಲ್ಲಿ ಶೇಖರಿಸಲ್ಪಟ್ಟವು. ಇದೆಲ್ಲಾ ಹೇಗೆ ಸಂಭವಿಸಿತು? ಇದೆಲ್ಲವೂ ನನ್ನೊಳಗಿನ ದೈವವು ಹೇಳಿದ ಮಾತುಗಳನ್ನು ಕೇಳುವುದರಿಂದ ಸಂಭವಿಸಿತು. ಮತ್ತು ನನ್ನ ಸಂಕಲ್ಪ ನೆರವೇರುವುದಕ್ಕಾಗಿ ನಾನು ಕೇವಲ 33.33% ಮಾತ್ರ ಇದ್ದು, 33.33% ಆತ್ಮಕ್ಕೆ ಮತ್ತು ಇನ್ನುಳಿದ 33.33% ಪರಮಾತ್ಮನಿಗೆ ಸ್ಥಾನವನ್ನು ನೀಡುವುದರಿಂದ ಸಂಭವಿಸಿತು. ಆದುದರಿಂದ ಜೀವಾತ್ಮ, ಆತ್ಮ ಮತ್ತು ಪರಮಾತ್ಮ ಈ ಮೂವರೂ ಸೇರಿದರೆ ಏನನ್ನಾದರೂ ಸಾಧಿಸಬಹುದು.

ತಾನೊಂದು ಬಗೆದರೆ ದೈವವೊಂದು ಬಗೆಯುತ್ತದೆ ಎನ್ನುವ ನಾಣ್ಣುಡಿ ಇದೆ. ನಾನು  ನನ್ನ ವೆಬ್ ಸೈಟ್ ಹತ್ತು ವರ್ಷ ಇರುತ್ತದೆ ಎಂದು ಭಾವಿಸಿದ್ದೆನು, ಆದರೆ ದೈವವು ಎರಡೇ ವರ್ಷಗಳಲ್ಲಿ ಅದನ್ನು ಇಲ್ಲದಂತೆ ಮಾಡಿದನು. ಅದು ದೈವದ ಸಂಕಲ್ಪವಾಗಿತ್ತು. ಮೊದಲು ನಾನು ಸಿಟ್ಟಾಗಿ ಬೈದುಕೊಂಡೆನು. ನಂತರ ಆ ದೈವವು ನನ್ನ ವಿರುದ್ಧವಾಗಿ ಏಕೆ ಯೋಚಿಸಿದನು? ಬಹುಶಃ ಹಾಗೆ ಮಾಡಲು ಏನೋ ಕಾರಣವಿರಬಹುದೆಂದು ಭಾವಿಸಿದೆನು. ದೈವವು ನನಗೆ ಕಷ್ಟಕ್ಕೀಡು ಮಾಡಿದ್ದಾನೆಂದರೆ ಅದರಲ್ಲೇನೋ ನಾನು ಗುರುತಿಸಬೇಕಾದಂಥಹ ಗುಟ್ಟು ಅಡಗಿರುತ್ತದೆಂದು, ದೈವವೇ ನಿನ್ನ ಸಂಕಲ್ಪದ ಪ್ರಕಾರವೇ ಆಗಲಿ, ನಷ್ಟದಿಂದಾಗಿ ನನ್ನಲ್ಲೇನು ನೋವು ಏರ್ಪಟ್ಟಿದೆಯೋ ಅದನ್ನು ದಿವ್ಯವಾದ ದೇವರ ಪ್ರಸಾದವೆಂದುಕೊಂಡು ಸಂತೋಷದಿಂದ ಸ್ವೀಕರಿಸಿ ಅನುಭವಿಸುತ್ತೇನೆಂದು, ಆ ನೋವನ್ನು ಪ್ರೀತಿಯಿಂದ, ಇಷ್ಟಪಟ್ಟು ಅನುಭವಿಸಿ ನನ್ನೊಳಗೆ ಧರ್ಮ ಸ್ಥಾಪನೆಯನ್ನು ಮಾಡಿದೆನು. ಎಂದರೆ, ಮೋಸಗೊಳಿಸುವವರೂ ಸಹ 33.33% ಇರಲೇಬೇಕು ಎಂದು ಗ್ರಹಿಸಬೇಕು. (ಧರ್ಮದ ಬಗ್ಗೆ ಇನ್ನಷ್ಟು ವಿಷಯಗಳನ್ನು "ಧರ್ಮ" ಎನ್ನುವ ಟಾಪಿಕ್ ನಲ್ಲಿ ಓದಿ ತಿಳಿದುಕೊಳ್ಳಿರಿ).

ಯಾವಾಗ ನೀವು ಸಮಸ್ಯೆಯನ್ನು ದಿವ್ಯವಾಗಿ ಅನುಭವಿಸಿ ಧರ್ಮಸ್ಥಾಪನೆಯನ್ನು ಮಾಡುತ್ತೀರೋ, ಆಗ ದೇವರು ನಿಮಗೆ ಬಾಹ್ಯದಲ್ಲಿ ಯಾವುದು ಅಗತ್ಯವೋ ಅದನ್ನು ಪೂರೈಸುತ್ತಾನೆ. ದೇವರು ನನ್ನ ಅರ್ಹತೆಗೆ ಅನುಗುಣವಾಗಿ ನನಗೆ 15 ಲಕ್ಷದ ಫ್ಲ್ಯಾಟ್ ನೀಡಿದನು. ನಾನು ದೇವರಲ್ಲಿ ಕೋಟಿಗಟ್ಟಲೆ ಹಣ ನೀಡೆಂದು

ಕೇಳಬಹುದಾಗಿತ್ತು, ಆದರೆ ದೇವರಿಗೆ ಗೊತ್ತು ನನಗೆಷ್ಟು ಕೊಡಬೇಕೆಂದು. ಅವಶ್ಯಕತೆಗಿಂತ ಹೆಚ್ಚಾಗಿ ನೀಡಿದರೆ ನಾವು ಮಾಯೆಯಲ್ಲಿ ಸಿಲುಕುತ್ತೇವೆಂದು ದೇವರಿಗೆ ಗೊತ್ತು. ನಮ್ಮ ದೈವದೊಂದಿಗೆ ನಾವು ಜೊತೆಗೂಡಿ ಕೆಲಸವನ್ನು ಮಾಡಿದರೆ, ಅವನ ಸಂಕಲ್ಪವನ್ನು ನಾವು ನೆರವೇರಿಸಿದರೆ, ಎಂದರೆ ಜೀವನದಲ್ಲಿ ನಮಗೆ ಬರುತ್ತಿರುವ ಕಷ್ಟ-ಸುಖಗಳನ್ನು ದಿವ್ಯವಾಗಿ ಅನುಭವಿಸುತ್ತಾ ಧರ್ಮ ಸ್ಥಾಪನೆಯನ್ನು ಕೈಗೊಂಡರೆ ಮತ್ತು ದೈವಿಕ ಗುಣಗಳನ್ನು ಹೆಚ್ಚಿಸಿಕೊಂಡು ಅವನೊಂದಿಗೆ ಶೃತಿಗೊಂಡರೆ ಅವನು ಖಂಡಿತವಾಗಿ ನಮಗೆ ಬೇಕಾದವುಗಳನ್ನು ಪೂರೈಸುತ್ತಾನೆ.

## ಪಾತ್ರಧಾರನಿಂದ ಸೂತ್ರಧಾರನಾಗಿ ಪರಿವರ್ತನೆ ಹೊಂದುವುದು ಹೇಗೆ?

ದೈವಕ್ಕೆ ತಕ್ಕಂತೆ ನಾವು ಶೃತಿಗೊಳ್ಳಬೇಕು. ಆಗ ಮಾತ್ರ ನಮಗೆ, ಅವನೊಂದಿಗೆ ಸಂಪರ್ಕವೇರ್ಪಡುತ್ತದೆ. ಆದ್ದರಿಂದ ನೀವು ಪ್ರತಿಯೊಂದು ಪರಿಸ್ಥಿತಿಯಲ್ಲೂ ಅವನೊಂದಿಗೆ ಶೃತಿಗೊಳ್ಳುವುದೇ ನಿಮ್ಮ ಮುಂದೆ ಈಗಿರುವ ನಿಜವಾದ ಸವಾಲು. ಆದ್ದರಿಂದ ಅವನಿಗೆ ಅನುಗುಣವಾಗಿ ಹೇಗೆ ಬದಲಾಗಬೇಕು? ಅವನನ್ನು ಸಮೀಪಿಸುವುದು ಹೇಗೆ? ಅವನ ವಿಳಾಸವೇನು? ಅವನ ಗುಣ-ಲಕ್ಷಣಗಳೇನು?.... ಎನ್ನುವವುಗಳ ಬಗ್ಗೆ ನೀವು ತಿಳಿದುಕೊಳ್ಳಬೇಕು.

ಅವನು ಪಾತ್ರಧಾರನೋ ಅಥವಾ ಸೂತ್ರಧಾರನೋ? ಅವನು ನಟಿಸುವಂಥವನೋ ಅಥವಾ ನಡೆಸುವಂಥವನೋ? ಅವನು ನಡೆಸುವಂಥವನು ಮತ್ತು ನೀವು ನಟಿಸುವಂಥವರು. ಆದ್ದರಿಂದ ನೀವು, ನಡೆಸುವವನ ಮತ್ತು ನಟಿಸುವವನ ನಡುವೆಯ ವ್ಯತ್ಯಾಸವನ್ನು ಚೆನ್ನಾಗಿ ಅರ್ಥಮಾಡಿಕೊಳ್ಳಬೇಕು. ನಿಮಗೆ ಸುಲಭವಾಗಿ ಅರ್ಥವಾಗುವಂತೆ ಹೇಳಬೇಕೆಂದರೆ, ನಡೆಸುತ್ತಿರುವವನೆಂದರೆ ನಿರ್ದೇಶಕ, ನಟಿಸುತ್ತಿರುವವನೆಂದರೆ ಪಾತ್ರಧಾರ. ಅಂತರ್ಮುಖಿಯಾಗಿ ಹೇಳಬೇಕೆಂದರೆ ಆತ್ಮವು ನಡೆಸುವವನು ಮತ್ತು ಜೀವಾತ್ಮ ಎಂದರೆ ನೀವು, ನಟಿಸುವವರು. ನೀವು ನಟರಾಗಿಯೇ ಉಳಿದು ಹೋಗುತ್ತಿದ್ದೀರಿ, ನೀವು ನಡೆಸುವಂಥವರಂತೆ ತಯಾರಾಗಬೇಕು. ಎಂದರೆ ಪ್ರತಿಯೊಂದು ಪರಿಸ್ಥಿತಿಯಲ್ಲೂ ನೀವು ಪಾತ್ರಧಾರನಿಂದ ಸೂತ್ರಧಾರನಾಗಿ ಪರಿವರ್ತನೆಗೊಳ್ಳುವ ಅಭ್ಯಾಸವನ್ನು ಮಾಡಬೇಕು.

ನೀವೇ ನಿರ್ದೇಶಕರಾಗಬೇಕಾಗಿರುವುದರಿಂದ, ಇಲ್ಲಿ ನೀವು ನಿರ್ದೇಶಕ ಮತ್ತು ಪಾತ್ರಧಾರನ ಮಧ್ಯೆವಿರುವ ವ್ಯತ್ಯಾಸವನ್ನು ತಿಳಿದುಕೊಳ್ಳಬೇಕು. ನೀವು ನಿರ್ದೇಶಕರಾಗುವವರೆಗೂ, ಮೂಲ (Original) ನಿರ್ದೇಶಕನ ಸಮೀಪ ತಲುಪಲು ಸಾಧ್ಯವಿಲ್ಲ. ಆದ್ದರಿಂದ ಮೊದಲು ನೀವು ಸಹಾಯಕ ನಿರ್ದೇಶಕರಾಗಬೇಕು (Assistant Director). ನಿಮ್ಮ ಮೂಲ ನಿರ್ದೇಶಕನು ನಿಮ್ಮ ಆತ್ಮ.

ನೀವು ಚಲನಚಿತ್ರಗಳನ್ನು ನೋಡುತ್ತೀರಲ್ವಾ! ಚಲನಚಿತ್ರದಲ್ಲಿ ಯಾರನ್ನು ನೋಡುತ್ತೀರಿ? ನಾಯಕ, ನಾಯಕಿ, ಖಳನಾಯಕ, ಹಾಸ್ಯನಟ ಮುಂತಾದವರನ್ನೆಲ್ಲಾ ನೋಡುತ್ತೀರಿ, ಎಂದರೆ ಅರ್ಥ, ಮೂರು ಗುಣಗಳನ್ನೂ ಹೊಂದಿರುವ ಒಳ್ಳೆಯ-ಕೆಟ್ಟ-ತಟಸ್ಥದ ಪಾತ್ರಗಳನ್ನು ನೀವು ತಪ್ಪದೇ ನೋಡುತ್ತೀರಿ. ಚಲನಚಿತ್ರದಲ್ಲಿ ನಾಯಕನ ಮಾತನ್ನು ನಾಯಕಿಯು ಕೇಳುತ್ತಾಳಾ? ಅಥವಾ ನಾಯಕಿಯ ಮಾತುಗಳನ್ನು ನಾಯಕನು ಕೇಳುತ್ತಾನಾ? ಇಬ್ಬರೂ ಸಹ ನಿರ್ದೇಶಕನು ಹೇಳಿದಂತೆ ಕೇಳುತ್ತಾರೆಯೇ ಹೊರತು, ಪಾತ್ರಧಾರಿಗಳು ಒಬ್ಬರ ಮಾತುಗಳನ್ನು ಮತ್ತೊಬ್ಬರು ಕೇಳುವುದಿಲ್ಲ. ಆದ್ದರಿಂದ, ಇಲ್ಲಿ ನಾಯಕನೂ ಸಹ ನಿರ್ದೇಶಕನ ಕೈಯಲ್ಲಿಯ ಕೀಲು ಬೊಂಬೆಯಾಗಿ ಮತ್ತು ತಾನು ಬಯಸಿದ್ದನ್ನು ಸಾಧಿಸಲು ಸಾಧ್ಯವಿಲ್ಲವೆಂದು ನೀವು ಅರ್ಥಮಾಡಿಕೊಳ್ಳಬೇಕು. ಆದುದರಿಂದ ನೀವು ನಿರ್ದೇಶಕರಾಗದ ಹೊರತು ನಿಮ್ಮ ಜೀವನವು ನಿಮ್ಮ ಕೈಯ್ಯಲ್ಲಿರುವುದಿಲ್ಲ.

ಹೊರಗಡೆಯಿಂದ ನಿರ್ದೇಶಕನು ಎಷ್ಟೇ ಒಳ್ಳೆಯವನಾಗಿ ಕಂಡರೂ, ಪ್ರತಿಯೊಂದು ಗುಣಗಳ ಅನುಭೂತಿಯು ಅವನಲ್ಲಿ ಸ್ವಲ್ಪವಾದರೂ ಇದ್ದೇ ಇರುತ್ತದೆ. ಇಲ್ಲದೇ ಇದ್ದರೆ ಅವನು ಆ ಪಾತ್ರವನ್ನು ಸೃಷ್ಟಿಸಲು ಸಾಧ್ಯವಿಲ್ಲ. ಚಿತ್ರೀಕರಣದ ವೇಳೆ ನಿರ್ದೇಶಕನು ಯಾರೊಂದಿಗೂ ಪಕ್ಷಪಾತವಹಿಸುವುದಿಲ್ಲ. ಪ್ರತಿಯೊಬ್ಬರನ್ನು ಸಮಾನ ದೃಷ್ಟಿಯಿಂದ ನೋಡುತ್ತಿರುತ್ತಾನೆ. ತಾನು ಸೃಷ್ಟಿಸಿದ ವಿರುದ್ಧವಾದ ಪಾತ್ರಗಳಿಗೂ ಸಹ ಸಮಾನವಾದ ಶಕ್ತಿಯನ್ನು ಮತ್ತು ಮೌಲ್ಯವನ್ನು ನೀಡುತ್ತಾ ಅವುಗಳಿಗೆ ನಿರ್ದೇಶಿಸುತ್ತಾ ಸಿನಿಮಾವನ್ನು ತೆಗೆಯುತ್ತಾನೆ. ಇಂದಿನವರೆಗೆ ಯಾವ ನಿರ್ದೇಶಕನೂ ಸಹ ಕೇವಲ ಒಳ್ಳೆಯ ಪಾತ್ರಗಳನ್ನೇ ಉಪಯೋಗಿಸಿಕೊಂಡು ಚಿತ್ರವನ್ನು ತೆಗೆದಿಲ್ಲ ಹಾಗೂ ಮುಂದೆ ಭವಿಷ್ಯತ್ತಿನಲ್ಲಿ ತೆಗೆಯುವುದೂ ಸಹ ಇಲ್ಲ. ಏಕೆಂದರೆ ಅದು ಅಸಾಧ್ಯವಾದುದು. ಒಳ್ಳೆಯತನದ ಶ್ರೇಷ್ಠತೆಯನ್ನು ಎತ್ತಿ ತೋರಿಸಬೇಕೆಂದರೆ ಕೆಟ್ಟದರ ಅವಶ್ಯಕತೆ ಖಂಡಿತವಾಗಿ ಇರುತ್ತದೆ. ಅದೇ ರೀತಿ ಕೆಟ್ಟದರ ಒರಟುತನವನ್ನು ಎತ್ತಿ ತೋರಿಸಬೇಕೆಂದರೆ ಒಳ್ಳೆಯ ಅಂದರೆ ಸೌಮ್ಯ ಪಾತ್ರಗಳನ್ನು ಖಂಡಿತವಾಗಿ ಸೃಷ್ಟಿಸಲೇಬೇಕು.

ಭಗವಂತನ ದೃಷ್ಟಿಯಲ್ಲಿ ಇದೆಲ್ಲವೂ ಜಗನ್ನಾಟಕ. ಆದ್ದರಿಂದ ಅವನು ಸಾಕ್ಷೀಭೂತನಾಗಿದ್ದು ಪ್ರತಿಯೊಬ್ಬರಿಗೂ ಗಾಳಿ, ಬೆಳಕು, ನೀರು ಮುಂತಾದವುಗಳನ್ನು ಸಮಾನ ರೀತಿಯಲ್ಲಿ ನೀಡುತ್ತಾನೆ. ಹಾಗೆಯೇ ಬಿರುಗಾಳಿಯು, ಪ್ರಕೃತಿಯಲ್ಲಿ ದಾರಿಗೆ ಅಡ್ಡ ಬರುವ ಎಲ್ಲವನ್ನೂ ತನ್ನೊಂದಿಗೆ ಹಾರಿಸಿಕೊಂಡು ಹೋಗಿ ಬಿಡುತ್ತದೆ. ಇದರಲ್ಲಿ ಒಳ್ಳೆಯವರು ಮತ್ತು ಕೆಟ್ಟವರೆನ್ನುವ ಬೇಧ ಭಾವವಿಲ್ಲದೇ ಇಬ್ಬರೂ ಸಾಯುತ್ತಾರೆ. ದಾರಿಯಲ್ಲಿರುವ ಗುಡಿ, ಗೋಪುರಗಳು, ಚರ್ಚ್, ಮಸೀದಿಗಳೆಲ್ಲವೂ ಧ್ವಂಸವಾಗಿ ಹೋಗುತ್ತವೆ. ಅಂದರೆ ಪ್ರಕೃತಿಯು ಯಾರೊಂದಿಗೂ ವ್ಯತ್ಯಾಸವನ್ನು ತೋರಿಸುವುದಿಲ್ಲ. ಅಂದರೆ ಸೃಷ್ಟಿಯನ್ನು ಮುಂದುವರಿಸಲು ಒಳ್ಳೆಯ, ಕೆಟ್ಟವರಿಬ್ಬರ ಅವಶ್ಯಕತೆಯೂ ಇರುತ್ತದೆ. ಆದ್ದರಿಂದಲೇ ಇದೆಲ್ಲವೂ ಪರಮಾತ್ಮನು ಆಡಿಸುತ್ತಿರುವ ಜಗನ್ನಾಟಕವೆಂದು ಹೇಳುತ್ತಾರೆ.

ಆದರೆ ಅಜ್ಞಾನ ಮತ್ತು ಮಾಯೆಯಲ್ಲಿ ಸಿಲುಕಿರುವ ನೀವು ಇಷ್ಟಪಟ್ಟವರೇ ಇರಬೇಕು, ಇಷ್ಟಪಡದವರು ಇರಬಾರದೆಂದು ಭಾವಿಸುತ್ತಿದ್ದೀರಿ. ಒಳ್ಳೆಯವರೆಲ್ಲರೂ, ಕೆಟ್ಟವರು ಇರಬಾರದೆಂದು ಹಾಗೆಯೇ ಕೆಟ್ಟವರೆಲ್ಲರೂ ಒಳ್ಳೆಯವರು ಇರಬಾರದೆಂದು ಭಾವಿಸುತ್ತಾರೆ. ಈ ರೀತಿಯಾಗಿ ಭಾವಿಸಿದರೆ ನೀವು ಅಧರ್ಮವನ್ನು ಮಾಡುತ್ತಿರುವಂತೆ ಎಂದು ಗ್ರಹಿಸಿರಿ. ಏಕೆಂದರೆ ಯಾವುದಾದರೊಂದು ಕಡೆಗೆ ಇದ್ದು, ಅದರ ವಿರುದ್ಧವಾದುದನ್ನು ತಿರಸ್ಕರಿಸುವುದೆಂದರೆ ನೇರವಾಗಿ ದೈವನಿಂದನೆ ಮಾಡಿದಂತೆ ಆಗುತ್ತದೆ. ಏಕೆಂದರೆ ಇವೆಲ್ಲವೂ ಸೃಷ್ಟಿಸಿರುವುದು ದೇವರೇಯಾದ್ದರಿಂದ.

ಹಾಗಲ್ಲದೇ ಜ್ಞಾನ ದೃಷ್ಟಿಯೊಂದಿಗೆ ಆಲೋಚಿಸಿದರೆ, ಈ ಸೃಷ್ಟಿ ಮುಂದುವರೆಯಲು ಮೂರು ವಿರುದ್ಧವಾದ ಪಾತ್ರಗಳನ್ನು ಧರಿಸುವ ವ್ಯಕ್ತಿಗಳು ಖಂಡಿತವಾಗಿ ಬೇಕಾಗುತ್ತಾರೆ. ಏಕೆಂದರೆ ದೇವರಲ್ಲಿ ಮೂರು ಗುಣಗಳು ಸಮಾನ ಅನುಪಾತದೊಂದಿಗೆ ಮಿಶ್ರಣಗೊಂಡು ಒಂದಾಗಿ ಇರುತ್ತವೆ. ಅಂದರೆ ಸೃಷ್ಟಿಯು ಸಾಗಬೇಕೆಂದರೆ ಬೆಳಕು-ಕತ್ತಲು-ಸಂಧ್ಯಾ ಅಂದರೆ ಒಳ್ಳೆಯ-ಕೆಟ್ಟ-ತಟಸ್ಥ ಗಳೆನ್ನುವವು ಖಂಡಿತವಾಗಿ ಬೇಕಾಗುತ್ತವೆ. ಅವು ಇಲ್ಲದಿದ್ದರೆ ಪ್ರಕೃತಿಯು ಸಮತೋಲನೆಯನ್ನು ಕಳೆದುಕೊಂಡು ಪ್ರಳಯ ಸಂಭವಿಸಬಹುದು. ಆದುದರಿಂದ ಕೇವಲ ಒಳ್ಳೆಯವರೇ ಇರುವ ಪ್ರಪಂಚ ಬೇಕೆನ್ನುವುದು ಅಸಾಧ್ಯ. ಒಂದು - ಪ್ರತ್ಯೇಕವಾಗಿರುವ ಮೂರು ಗುಣಗಳಿಂದ ಪ್ರಸ್ತುತ ಪ್ರಪಂಚ ಮುಂದುವರೆಯುತ್ತದೆ ಅಥವಾ - ಮೂರು ಗುಣಗಳ ಮಿಶ್ರಣದಿಂದ ಒಂದಾಗಿರುವ ಸ್ವಚ್ಛವಾದ ಪ್ರಪಂಚವು ಏರ್ಪಡುತ್ತದೆ. (ಸಮತೋಲನೆಯ ಬಗ್ಗೆ ಇನ್ನಷ್ಟು ಮಾಹಿತಿಯ ಬಗ್ಗೆ "ಸಮತೋಲನೆ" ಎನ್ನುವ ಟಾಪಿಕ್ ನ್ನು ಓದಿರಿ)

ಅಣುವಿನಿಂದ (Atom) ಎಲೆಕ್ಟ್ರಾನ್ಸ್ ನ್ನು ಬೇರ್ಪಡಿಸಲು ಸಾಧ್ಯವೇ? ಬೇರ್ಪಡಿಸಲು ಸಾಧ್ಯವಿಲ್ಲ. ಸೃಷ್ಟಿಯು ಕೇವಲ ಪುರುಷರಿಂದ ಮಾತ್ರ ನಡೆಯಲು ಸಾಧ್ಯವೇ? ಅಥವಾ ಕೇವಲ ಸ್ತ್ರೀಯರಿಂದ ನಡೆಯಲು ಸಾಧ್ಯವೇ? ಖಂಡಿತವಾಗಿ ನಡೆಯುವುದಿಲ್ಲ ಮತ್ತು ಅಸಾಧ್ಯವೂ ಸಹ. ಆದುದರಿಂದ ಪ್ರತಿಯೊಂದರಲ್ಲೂ ವಿರುದ್ಧವಾದವುಗಳು ಇರಲೇಬೇಕು ಮಹಾಭಾರತದಲ್ಲಿ ಅಂತಿಮವಾಗಿ ಪಾಂಡವರು ವಿಜಯಿಗಳಾದರು. ಕೌರವರೆಲ್ಲರೂ ಮರಣಹೊಂದಿದರು. ಆದರೆ ಕೆಟ್ಟದ್ದನ್ನು ನಾಶಗೊಳಿಸುವ ಭರದಲ್ಲಿ ಪಾಂಡವರ ಮಕ್ಕಳೆಲ್ಲರೂ ಮರಣಹೊಂದಿದರು. ಆದುದರಿಂದ ತುಂಬಾ ಜನರು ಭಾವಿಸಿದಂತೆ ಇಲ್ಲಿ ಕೆಟ್ಟದರ ಮೇಲೆ ಒಳ್ಳೆಯದು ಜಯವಾಗಲಿಲ್ಲ. ಅಧರ್ಮವು ನಾಶವಾಗಿ ಧರ್ಮಸ್ಥಾಪನೆಯು ಸಂಭವಿಸಿದೆ ಮತ್ತು ಸೃಷ್ಟಿಯು ತನ್ನ ಸಮತೋಲನೆಯನ್ನು ಕಾಪಾಡಿಕೊಂಡಿದೆ.

ಹಾಗೆಯೇ ನಾವು ನೋಡುವ ಬಹುತೇಕ ಚಲನಚಿತ್ರಗಳಲ್ಲಿ ಸಹ ಹೀರೋ ವಿಜಯಿಯಾದಂತೆ ತೋರಿಸುತ್ತಾರೆ. ಆದರೆ ನಾಯಕಿಗೆ ಏನಾದರೊಂದು ಆಗುತ್ತದೆ, ನಾಯಕನಿಗೆ ಸಂಬಂಧಪಟ್ಟವರು ತೊಂದರೆಗೀಡಾಗುತ್ತಾರೆ, ಖಳನಾಯಕನು ಒಳ್ಳೆಯವರನ್ನು ಕೊಲ್ಲುತ್ತಾನೆ, ಅಂದರೆ ಇಲ್ಲಿ ಒಳ್ಳೆಯದೆನ್ನುವುದು ಸಂಪೂರ್ಣವಾಗಿ (100%) ಜಯಶಾಲಿಯಾಗುತ್ತದಾ?! ಆದರೆ, ಅಂತಿಮವಾಗಿ ಒಳ್ಳೆಯದು ಜಯವಾಯಿತೆಂದು, ನಿರ್ದೇಶಕರು "ಶುಭಂ" ಎಂದು ತೋರಿಸಿ ಚಲನಚಿತ್ರವನ್ನು ಅಂತ್ಯಗೊಳಿಸುತ್ತಾರೆ.

ಅದೇ ರೀತಿ ಎಲ್ಲರ ಜೀವನವನ್ನು ಒಂದು ಬಾರಿ ಗಮನಿಸಿ, ಒಳ್ಳೆಯವರ ಜೀವನವಾದರೂ ಸರಿಯೇ, ಕೆಟ್ಟವರ ಜೀವನವಾದರೂ ಸರಿಯೇ, ಅಂತಿಮವಾಗಿ ಎಲ್ಲರ ಜೀವನವು ದರಿದ್ರವಾಗಿ ಕೊನೆಗೊಳ್ಳುತ್ತದೆಯೇ ಹೊರತು ಸಂತೋಷದಿಂದ ಕೊನೆಯಾಗುವುದಿಲ್ಲ. ಪ್ರತಿಯೊಬ್ಬರೂ ತಮ್ಮ ಸಮಸ್ಯೆಗಳಿಂದ ಚಡಪಡಿಸುತ್ತಾ, ಯಾಕಪ್ಪಾ ಈ ಜೀವನ ಎನ್ನುವ ಭಾವನೆಯಿಂದ ಜೀವಿಸುತ್ತಾ ಕೊನೆಗೆ ದುಃಖದಿಂದಲೇ ಸಾಯುತ್ತಿದ್ದಾರೆ. ಏಕೆಂದರೆ ಅವರಲ್ಲಿ ಧರ್ಮದ ನೆಲೆ ಇರುವುದಿಲ್ಲ. ಸೂತ್ರದಾರರಾಗಿ ತಮ್ಮ ಜೀವನವನ್ನು ಸಾಗಿಸದೇ ಇರುವುದು ಇದಕ್ಕೆ ಕಾರಣ. ಆದುದರಿಂದ ಏಕೆ ನಿಮ್ಮ ಜೀವನವು ದುಃಖದಿಂದ ಕೊನೆಗೊಳ್ಳುತ್ತಿದೆ, ಏಕೆ ತಮ್ಮ ಜೀವನವನ್ನು ಹಾಯಾಗಿ, ಸಂತೋಷದಿಂದ ಮತ್ತು ಲಘುವಾಗಿ ಮುಂದುವರಿಸುವುದಕ್ಕಾಗುತ್ತಿಲ್ಲ ಎನ್ನುವುದರ ಬಗ್ಗೆ ಖಂಡಿತ ನೀವು ಆಲೋಚಿಸಬೇಕು.

ನಿರ್ದೇಶಕನು ಎಲ್ಲಾ ಪಾತ್ರಗಳನ್ನು ಸಮಾನ ದೃಷ್ಟಿಯಿಂದ ಕಾಣುತ್ತಾ, ಎಲ್ಲರನ್ನೂ ಅವರವರ ನಟನೆಯಲ್ಲಿ ಜೀವವನ್ನು ತುಂಬುತ್ತಾ, ಎಲ್ಲಾ ಪಾತ್ರಗಳೊಂದಿಗೆ ಸಂತೋಷದಿಂದ ಓಡಾಡಿಕೊಂಡಿರುತ್ತಾನೆ. ಅದೇ ರೀತಿ, ಜೀವಾತ್ಮ ಮತ್ತು ಆತ್ಮಕ್ಕೆ ಸಾವು ಇಲ್ಲವೆಂದು, ಶರೀರಕ್ಕೆ ಮಾತ್ರ ಹುಟ್ಟು-ಸಾವುಗಳಿವೆಯೆಂದು ಪರಮಾತ್ಮನಿಗೆ ಗೊತ್ತು. ಶರೀರ ನಾಶವಾದರೂ ಸಹ ಆತ್ಮ ತನ್ನ ಎದುರಲ್ಲೇ ಸಜೀವವಾಗಿರುತ್ತದೆ. ಆದುದರಿಂದ ದೇವರ ದೃಷ್ಟಿಯಲ್ಲಿ ಇದೆಲ್ಲಾ ಸಂತೋಷದಿಂದ ಕೂಡಿದ ನಾಟಕವೇ ಹೊರತು ಅವನಿಗೆ ಯಾವುದೇ ರೀತಿಯ ನೋವುಂಟಾಗಲಾರದು. ಆದ್ದರಿಂದ ಅವನು ಎಲ್ಲದರಲ್ಲೂ ನಿಶ್ಚಲವಾಗಿರುತ್ತಾನೆ.

ಅದೇ ರೀತಿ ದೇವರು, ಭಗವದ್ಗೀತೆಯಲ್ಲಿ ಹೇಳಿದಂತೆ, ನಾವು ಒಳ್ಳೆಯದನ್ನು ಮತ್ತು ಕೆಟ್ಟದನ್ನು ಸಮಾನವಾಗಿ ಸ್ವೀಕರಿಸುವಂಥಹ ಸ್ಥಿತಿಗೆ ಎಂದರೆ ಸ್ಥಿತ-ಪ್ರಜ್ಞೆಯ (ಸಮಕಾಲೀನ ಸ್ಥಿತಿಗೆ) ಸ್ಥಿತಿಗೆ ತಲುಪಬೇಕು. ಆದರೆ ನಾವು ಇದನ್ನು ಮಾಡುತ್ತಿಲ್ಲ. ಅವನೊಂದು ಹೇಳಿದರೆ ನಾವೊಂದು ಮಾಡುತ್ತಿದ್ದೇವೆ. ಅವನು ಹೇಳಿದ್ದನ್ನು ನಾವು ಮಾಡುತ್ತಿಲ್ಲವಾದ್ದರಿಂದಲೇ ಅವನು ನಮ್ಮ ಬಯಕೆಗಳನ್ನು ಈಡೇರಿಸುತ್ತಿಲ್ಲ. ಅವನು ಹೇಳಿದಂತೆ ಪ್ರಾಯೋಗಿಕವಾಗಿ

(Practically) ಮಾಡಿ ನೋಡಿರಿ. ಆಗಲೇ ನಿಮಗೆ ತಿಳಿದು ಬರುತ್ತದೆ, ಅವನೆಷ್ಟು ಅದ್ಭುತವಾದ ಸೃಷ್ಟಿಯನ್ನುಂಟು ಮಾಡಿದ್ದಾನೆಂದು.

**ಸಾಧನೆ**

ಉದಾಹರಣೆಗೆ, ನಿಮಗಿಂತ ಬಲಶಾಲಿಗಳು ನಿಮ್ಮನ್ನು ಮೋಸಮಾಡಿದರೆಂದುಕೊಳ್ಳಿ, ನೀವು ಬಾಹ್ಯದಲ್ಲಿ ಅವರನ್ನು ಸಾರ್ ಸಾರ್ ಎನ್ನುತ್ತಲೇ, ಅಂತರಂಗದಲ್ಲಿ ಅವರನ್ನು ಬಾಯಿಗೆ ಸಿಕ್ಕ ಹಾಗೆ ಬೈಯ್ಯುತ್ತಿರುತ್ತೀರಿ. ಎಂದರೆ ಇಲ್ಲಿ ಮನಸಾ-ವಾಚಾ-ಕರ್ಮಣಾ ಒಂದೇ ರೀತಿಯಾಗಿ ಇಲ್ಲ. ಎಂದರೆ ನೀವು ಒಂದಾಗಿ ಇರದೇ ವಿಭಜನೆಗೊಂಡಿರುತ್ತೀರಿ. ಆಗ ಅಂತರಂಗದಲ್ಲಿರುವ ಮೋಸ ಶಕ್ತಿಗೆ ಕೋಪ ಉಂಟಾಗಿ ನಿಮ್ಮನ್ನು ಪುನಃ ಅವರು ಮೋಸಗೊಳಿಸುವಂತೆ ಮಾಡುತ್ತದೆ. ಆದ್ದರಿಂದ ನೀವು ಅವರಿಂದ ಮತ್ತೇ ಮತ್ತೇ ಮೋಸ ಹೋಗುತ್ತಲೇ ಇರುತ್ತೀರಿ. ಆದುದರಿಂದ ನೀವು ಮಾಡಬೇಕಾದ ಸಾಧನೆ ಏನೆಂದರೆ, "ನಾನು ಪುರುಷನೂ ಅಲ್ಲ ಸ್ತ್ರೀಯೂ ಅಲ್ಲ, ನಾನು ಜೀವಾತ್ಮನು, ಪ್ರತಿಯೊಂದು ಸಮಸ್ಯೆಯನ್ನು ನಾನೇ ಸೃಷ್ಟಿಸಿಕೊಂಡಿರುವೆನು, ಪ್ರತಿಯೊಂದು ಸಮಸ್ಯೆಗೂ ನನ್ನೊಳಗೆ ಪರಿಹಾರ ಇದೆ, ಅದಕ್ಕೋಸ್ಕರ ನಾನು ದೇವರ ಕಡೆಗೆ ಹೆಜ್ಜೆಯಿಡುತ್ತಿದ್ದೇನೆಂದು" ಭಾವಿಸಬೇಕು.

ಅದೇ ರೀತಿ, ನಿಮ್ಮ ಅಂತರಂಗದಲ್ಲಿ ಎರಡು ಪಾತ್ರಗಳ ಮಧ್ಯೆ ಘರ್ಷಣೆಯುಂಟಾಗುತ್ತಿರುವಾಗ ನೀವು ಗುರುತಿಸಬೇಕಾದುದೇನೆಂದರೆ, ನೀವು ಮೋಸ ಹೋದ ಪಾತ್ರದೊಂದಿಗೆ ನಿಮ್ಮನ್ನು ನೀವು ಗುರುತಿಸಿಕೊಂಡು ಮೋಸ ಮಾಡಿದವನನ್ನು ಬೈಯ್ಯುತ್ತಿರುವಿರೆಂದು ಅರ್ಥ. ಎಂದರೆ, ನೀವು ನಟನಾಗಿಯೇ ಉಳಿದಿದ್ದೀರೆಂದು. ಆಗ ನೀವು ನಟನಿಂದ ನಿರ್ದೇಶಕರಾಗಬೇಕೆಂದು ಸಂಕಲ್ಪವನ್ನಿಟ್ಟುಕೊಂಡು, ನಿಮ್ಮ ಪಾತ್ರದಿಂದ ನೀವು ಬೇರ್ಪಟ್ಟು, ಮೋಸ ಹೋದ ಪಾತ್ರದೊಂದಿಗೆ ಈ ರೀತಿಯಾಗಿ ಮಾತನಾಡಬೇಕು."ನಾನು ಒಳ್ಳೆಯವನು, ನಾನು ಯಾರನ್ನೂ ಮೋಸ ಮಾಡುವುದಿಲ್ಲ, ನಾನೇ ತುಂಬಾ ಶ್ರೇಷ್ಠನೆಂದು ಭಾವಿಸಿ, ಯಾವಾಗಲೂ ಮೋಸ ಮಾಡುವವರನ್ನು ದ್ವೇಷಿಸುತ್ತಿದ್ದೇನೆ. ಈ ರೀತಿಯಾಗಿ ನೀನು ಅವರನ್ನು ದ್ವೇಷಿಸುತ್ತಿರುವಿಯಾದ್ದರಿಂದ, ನೀನು ಅವರ ಕೈಯ್ಯಲ್ಲಿ ಮೋಸ ಹೋಗುತ್ತಿರುವೆ".

"ಆದರೆ ನನಗೆ ಇಬ್ಬರೂ ಸಮಾನರೇ. ನಾನು ಎಲ್ಲರೊಂದಿಗೆ ಸಹಕರಿಸುತ್ತೇನೆ. ನಾನೇ ಅವನಿಗೆ ಶಕ್ತಿಯನ್ನು ನೀಡಿ ನಿನ್ನನ್ನು ಮೋಸಗೊಳಿಸುವಂತೆ ಪ್ರೇರೇಪಿಸಿದ್ದೇನೆ. ಅದೇ ರೀತಿ ನೀನು ಮೋಸ ಹೋಗಬೇಕೆನ್ನುವುದರ ಸಲುವಾಗಿ ಅವನ ಮೇಲೆ ನಿನಗೆ ನಂಬಿಕೆ ಬರುವಂತೆ ಮಾಡಿದೆನು. ಏಕೆಂದರೆ ಎಲ್ಲಾ ತರಹದ ಪಾತ್ರಗಳನ್ನು ದಿವ್ಯವಾದ ದೃಷ್ಟಿಯಿಂದ ಕಾಣುವಂಥಹ ಸ್ಥಿತಿಗೆ ತಲುಪಿಸಿ, ನಿನ್ನನ್ನು ಸೂತ್ರಧಾರನಾಗಿ ಮಾಡುವುದೇ ನನ್ನ ಕರ್ತವ್ಯ. ಆದ್ದರಿಂದ ಇಲ್ಲಿ ಯಾರದ್ದೂ ತಪ್ಪಿಲ್ಲ. ಆದುದರಿಂದ ನೀನು ವಿರುದ್ಧವಾದ ಗುಣಗಳನ್ನೂ ಸಹ ಗೌರವಿಸು. ನಿನ್ನಲ್ಲಿ ಒಳ್ಳೆಯ ಗುಣಗಳು ಅತಿಯಾಗಿವೆ, ಅದನ್ನು 33.33% ಗೆ ಸೀಮಿತಗೊಳಿಸು. ಹಾಗೆಯೇ ನಾನು ನಿರ್ದೇಶಕನು ಎನ್ನುವ ಭಾವನೆಯೊಂದಿಗೆ ಇದ್ದು ಮೂರು ಗುಣಗಳು 33.33% ನಷ್ಟು ಇರಲೇಬೇಕೆಂದು" ಆ ಪಾತ್ರಕ್ಕೆ ನೀವು ಖಚಿತವಾಗಿ ಹೇಳಬೇಕು.

ಅದೇ ರೀತಿ, ಮೋಸಗೊಳಿಸುವ ಗುಣದೊಂದಿಗೂ ಸಹ ಇದೇ ರೀತಿ ಮಾತನಾಡಿ ಅದಕ್ಕೂ ಸಹ ಅರ್ಥವಾಗುವಂತೆ ಹೇಳಬೇಕು. "ನಾನೇ ನಿಮಗೆ ಈ ಪಾತ್ರಗಳನ್ನು ಮಾಡಬೇಕೆಂದು ಹೇಳಿದ್ದೇನೆಂದು, ನಾನೇ ನಿಮಗೆ ಶಕ್ತಿಯನ್ನು ನೀಡುತ್ತಿದ್ದೇನೆಂದು, ಆದರೆ ನಾನು ನಿಮ್ಮಿಬ್ಬರ ಬಳಿಯಲ್ಲಿ ಇದ್ದೇನೆನ್ನುವುದನ್ನು ಮರೆತು

ನೀವಿಬ್ಬರೂ ಒಬ್ಬರ ಮೇಲೊಬ್ಬರು ತಮ್ಮ ಪ್ರಾಬಲ್ಯವನ್ನು ಸಾಧಿಸಬೇಕೆಂದು ನೋಡುತ್ತಿರುವಿರಿ". ಚಲನಚಿತ್ರದಲ್ಲಿ ಪಾತ್ರಧಾರಿಗಳು ಒಬ್ಬರಿಗೊಬ್ಬರು ಗಾಯಪಡಿಸಿಕೊಳ್ಳುತ್ತಿರುವಂತೆ ನಟಿಸುತ್ತಾರಷ್ಟೇ, ಆಗಲೀ ನಿಜವಾಗಿಯೂ ಹೊಡೆದಾಡಿಕೊಳ್ಳುವುದಿಲ್ಲ. ಆದರೆ ನೀವು ಒಬ್ಬರಿಗೊಬ್ಬರು ನಿಜವಾಗಿಯೂ ಗಾಯಪಡಿಸಿಕೊಳ್ಳುತ್ತಾ ಸಾಯಿಸಬೇಕೆಂದು ನೋಡುತ್ತೀರಿ. ಆದರೆ ಸದಾ ಒಬ್ಬರೇ ಗೆಲುವನ್ನು ಸಾಧಿಸುವುದು ಮತ್ತು ಒಬ್ಬರೇ ಉಳಿಯುವುದು ಅಸಾಧ್ಯವೆಂದು ಹಾಗೂ ಇಬ್ಬರಿಲ್ಲದೇ ಯಾವುದೇ ಘಟನೆ ಸಂಭವಿಸಲಾರದೆಂದು ಅರ್ಥ ಮಾಡಿಕೊಳ್ಳಬೇಕು. ಆದುದರಿಂದ ಇದಕ್ಕೆ ಪರಿಹಾರ, ಎರಡು ಪಾತ್ರಗಳು ಒಬ್ಬರಿಗೊಬ್ಬರು ಗೌರವಿಸಿಕೊಳ್ಳುತ್ತಾ, ಸಮನ್ವಯದಿಂದ ಕೂಡಿ ನಟಿಸಬೇಕೆಂದು ಮತ್ತು ನಿರ್ದಿಷ್ಟ ದೃಶ್ಯ ಮುಗಿದ ನಂತರ ಇಬ್ಬರೂ ಸೇರಿ ಒಂದಾಗಿ ಹೋಗಬೇಕೆಂದು ಖಚಿತವಾಗಿ ಹೇಳಬೇಕು.

ಅನಂತರ, ಮೋಸ ಹೊಂದುವುದರಿಂದಾಗಿ ಏರ್ಪಟ್ಟ ನೋವನ್ನು ದೇವರ ಪ್ರಸಾದವೆಂದು ಭಾವಿಸಿ ಅನುಭವಿಸಿ. ಅದನ್ನು ಏನನ್ನಾದರೂ ಮಾಡಬೇಕೆಂದು ನೋಡದೇ, ಅದೇ ನಿಮ್ಮನ್ನು ಪರಿವರ್ತನೆಗೊಳಿಸಲು ಅದಕ್ಕೆ ಅನುಮತಿಯನ್ನು ನೀಡಿ. ಆ ನೋವಿಗೆ ಈ ರೀತಿಯಾಗಿ ಹೇಳಿರಿ, "ಹೇ ನನ್ನ ನೋವೇ, ಇಲ್ಲಿಯವರೆಗೆ ನಾನು ನಿನ್ನನ್ನು ಬದಲಾಯಿಸಬೇಕೆಂದು ನೋಡಿದೆನು ಅಥವಾ ನಿನ್ನಿಂದ ಓಡಿ ಹೋಗಬೇಕೆಂದು ನೋಡಿದೆನು ಅಥವಾ ನಿನ್ನನ್ನು ಸಾಯಿಸಬೇಕೆಂದು ನೋಡಿದೆನು. ಆದರೆ ಈಗ ನಾನು ನಿನ್ನನ್ನು ದೇವರ ಪ್ರತಿನಿಧಿಯನ್ನಾಗಿ ನೋಡುತ್ತೇನೆ. ನಾನು ಸೂತ್ರಧಾರನಾಗಿ ಆಗಲು ನನಗೆ ಸಹಕರಿಸು. ನಾನು ಈ ಮುಂಚೆ ಮಾಡಿದ ಕರ್ಮಗಳೆಲ್ಲವನ್ನೂ ಸುಟ್ಟುಹಾಕಿ ನನ್ನನ್ನು ಸ್ವಚ್ಛಗೊಳಿಸು" ಎಂದು ಆ ನೋವಿಗೆ ಸಮರ್ಪಿತರಾಗಿ. ಆನಂತರ ನೀವು ಏನನ್ನೂ ಮಾಡದೇ ಆ ನೋವಿನ ಮಧ್ಯದೊಳಗೆ ಹೋಗಿ ಕುಳಿತುಕೊಳ್ಳಿ. ಬೆಂಕಿಯಲ್ಲಿ ಬಂಗಾರವನ್ನು ಸುಟ್ಟಾಗ ಹೇಗೆ ಆ ಬೆಂಕಿಯು ಬಂಗಾರದಲ್ಲಿರುವ ಕೊಳಕನ್ನೆಲ್ಲಾ ತೊಲಗಿಸಿ ನಿಮಗೆ ಶುದ್ಧವಾದ ಬಂಗಾರವನ್ನು ನೀಡುತ್ತದೋ, ಅದೇ ರೀತಿಯಾಗಿ ನೋವು ಎನ್ನುವ ಬೆಂಕಿಯು ನಿಮ್ಮಲ್ಲಿರುವ ಕೊಳಕೆಲ್ಲವನ್ನೂ ತೊಲಗಿಸಿ ನಿಮ್ಮನ್ನು ಸ್ವಚ್ಛವಾಗುವಂತೆ ಮಾಡುತ್ತದೆ. ಅನಂತರ ಆ ನೋವು, ನಿಮ್ಮ ಸ್ವಚ್ಛಗೊಂಡ ಸ್ಥಿತಿಯನ್ನು ಕಂಡು ತನ್ನಷ್ಟಕ್ಕೆ ತಾನೇ ಕರಗಿ ಹೋಗುತ್ತದೆ.

ನಿರ್ದೇಶಕನು ತಾನು ನೀಡಿದ ಪಾತ್ರವನ್ನು, ಪಾತ್ರಧಾರನು ಸರಿಯಾಗಿ ಮಾಡುವವರೆಗೂ ಅದೇ ದೃಶ್ಯವನ್ನು ಹೇಗೆ ಮುಂದುವರೆಸುತ್ತಲೇ ಇರುತ್ತಾನೋ ಅದೇ ರೀತಿಯಾಗಿ ಮೋಸಗೊಂಡ ಪಾತ್ರವನ್ನು ನೀವು ದಿವ್ಯವಾಗಿ ಅನುಭವಿಸುವವರೆಗೂ ನಿಮ್ಮ ಆತ್ಮ ಅದೇ ಸಮಸ್ಯೆಯನ್ನು ಮುಂದುವರಿಸುತ್ತಲೇ ಇರುತ್ತದೆ. ಆ ಪಾತ್ರವನ್ನು ದಿವ್ಯವಾಗಿ ಅನುಭವಿಸಿದ ತಕ್ಷಣ ನಿಮಗೆ ನೀಡಿದ ಆ ಪಾತ್ರಕ್ಕೆ ಸಂಬಧಿಸಿದ ವೇಷ-ಭೂಷಣಗಳನ್ನು ತೊಲಗಿಸಿ ನಿಮಗೆ ಹೊಸ ಪಾತ್ರವನ್ನು ಸೃಷ್ಟಿಸಿ ಕೊಡುತ್ತದೆ. ಆತ್ಮವು ಈ ರೀತಿಯಾಗಿ ಏಕೆ ಮಾಡುತ್ತದೆಂದರೆ, ನೀವು ಭೂಮಿಯ ಮೇಲೆ ಬಂದಿರುವ ಗುರಿಯನ್ನು ತಿಳಿದುಕೊಳ್ಳುವ ಸಲುವಾಗಿ. ಎಂದರೆ, ಮೂರು ಗುಣಗಳಿಗೆ ಸಂಬಂಧಿಸಿದ ಎಲ್ಲಾ ಪಾತ್ರಗಳನ್ನು ಧರಿಸಿ, ಅವುಗಳನ್ನು ಅನುಭವದೊಂದಿಗೆ ತಿಳಿದುಕೊಂಡು, ಕೊನೆಗೆ ನಾನೇ ನಿರ್ದೇಶಕನು, ನಾನೇ ಆತ್ಮವು, ನಾನೇ ದೇವರು ಎಂದು ಅನುಭವಪೂರ್ವಕವಾಗಿ ತಿಳಿದುಕೊಳ್ಳುವ ಸಲುವಾಗಿ.

ಆತ್ಮವು, ಎಂದರೆ ಸಮಾನ ಅನುಪಾತದಲ್ಲಿರುವ ತಮೋ-ರಜೋ-ಸಾತ್ವಿಕ ಗುಣಗಳೊಂದಿಗೆ ನಲಿದಾಡುತ್ತಾ ನಾಟಕವನ್ನು ಸೃಷ್ಟಿಮಾಡಿ ಅವುಗಳಿಗೆ ಶಕ್ತಿಯನ್ನು ನೀಡುತ್ತದೆ. ನೀವು ಸಹ ಮೂರು ಗುಣಗಳನ್ನು ಉಪಯೋಗಿಸಿಕೊಳ್ಳಿರಿ. ಅಂತರಂಗದಲ್ಲಿ ಹೀಗೆ ಮಾಡಿದರೆ ಬಾಹ್ಯದಲ್ಲಿ ಏನು ಸಂಭವಿಸುತ್ತದೋ ನೀವೇ ನೋಡಿರಿ. ಅನಂದವೇ ನೀವಾಗುತ್ತೀರಿ. ಬಾಹ್ಯದಲ್ಲೂ ಸಹ ಅದ್ಭುತವಾದ ಪರಿಣಾಮಗಳನ್ನು ಪಡೆಯುತ್ತೀರಿ. ಆದುದರಿಂದ

ಪಾತ್ರಧಾರನಿಂದ ಸೂತ್ರಧಾರನಾಗಿ ಪರಿವರ್ತನೆಗೊಳ್ಳುವುದೇ ನಿಮ್ಮ ಎಲ್ಲಾ ಸಮಸ್ಯೆಗಳಿಗೆ ಪರಿಹಾರ. ಅನಂತರ ಒಮ್ಮೆಗೇ ಸೂತ್ರಧಾರನಾಗಿ ಇರುತ್ತಾ ಪಾತ್ರಗಳನ್ನು ಧರಿಸುವುದು. ಎಂದರೆ ದಿವ್ಯ ಮಾನವನಾಗಿ ಪರಿವರ್ತನೆಗೊಳ್ಳುವುದೆಂದು ಅರ್ಥ.

ಯಾವ ಸಮಸ್ಯೆಗಳಿಗಾದರೂ ನೀವು ಈ ವಿಧವಾಗಿ ಸಾಧನೆಯನ್ನು ಮಾಡಿದ್ದೇಯಾದರೆ, ಪ್ರತಿಯೊಂದಕ್ಕೂ ಪರಿಹಾರವನ್ನು ಕಂಡುಕೊಳ್ಳುತ್ತೀರಿ. ನಾನು 2004 ರಿಂದ ಈ ಸಾಧನೆಯನ್ನು ಮಾಡುತ್ತಾ ನನ್ನ ಜೀವನವನ್ನು ಆನಂದಕರವಾಗಿ ಸಾಗಿಸುತ್ತಿದ್ದೇನೆ. ನಾನೊಬ್ಬನೇ ಅಲ್ಲ, ಇನ್ನೂ ತುಂಬಾ ಜನರು ಈ ಸಾಧನೆಯನ್ನು ಮಾಡುತ್ತಾ ತಮ್ಮ ಸಮಸ್ಯೆಗಳನ್ನು ತಾವೇ ಬಗೆಹರಿಸಿಕೊಳ್ಳುತ್ತಾ ತಮ್ಮ ಜೀವನವನ್ನು ಆನಂದಕರವಾಗಿ ಸಾಗಿಸುತ್ತಿದ್ದಾರೆ.

ಆದುದರಿಂದ ದಯವಿಟ್ಟು ಪಾತ್ರಧಾರನಿಂದ ಸೂತ್ರಧಾರನಾಗಿ ಪರಿವರ್ತನೆಗೊಂಡು ನಿಮ್ಮ ಜೀವನದಲ್ಲಿ ಆನಂದದ ಸವಿಯನ್ನು ಪಡೆಯುತ್ತಾ ಇದೇ ಜನ್ಮವನ್ನು ನಿಮ್ಮ ಅಂತಿಮ ಜನ್ಮವನ್ನಾಗಿಸಿಕೊಳ್ಳಿರಿ. ಅದು ಕೇವಲ ನೀವು ಸೂತ್ರಧಾರರಾದಾಗ ಮಾತ್ರ ಸಾಧ್ಯವಾಗುತ್ತದೆ. ಪಾತ್ರಧಾರನಾಗಿ ಇರುವವರೆಗೂ ಒಳ್ಳೆಯ-ಕೆಟ್ಟ-ತಟಸ್ಥದ ಪಾತ್ರಗಳು ಧರಿಸುತ್ತಲೇ ಇರುತ್ತೀರಿ. ಆದರೆ ನೀವು ಎಂದೆಂದಿಗೂ ಮೂರು ಗುಣಗಳ ಅಧಿಪತಿಗಳಾಗುವುದಿಲ್ಲ ಮತ್ತು ನಿರ್ಗುಣ, ಗುಣಾತೀತ ಸ್ಥಿತಿಯನ್ನು ತಲುಪಲಾಗುವುದಿಲ್ಲ.

** ಇದನ್ನು ತೆಲುಗು ಭಾಷೆಯಿಂದ ಅನುವಾದಿಸಲ್ಪಟ್ಟಿದೆ. ತೆಲುಗು ಭಾಷೆಯಲ್ಲಿ ಓದಬೇಕೆಂದು ಬಯಸುವವರು ಈ ಲಿಂಕನ್ನು ಕ್ಲಿಕ್ ಮಾಡಿ ಓದಬಹುದು.

http://darmam.com/downloads/telugutopics/6.sutradhari.pdf

** ನ್ಯೂ ಎನರ್ಜಿ-ಅದ್ವೈತ ಕಾನ್ಸೆಪ್ಟ್ ಅನ್ನು ಕನ್ನಡದಲ್ಲಿ ಕೇಳಬೇಕೆಂದು (To Listen) ಬಯಸುವವರು ಈ ಲಿಂಕನ್ನು ಕ್ಲಿಕ್ ಮಾಡಿ ಕೇಳಬಹುದು (Listen). https://www.youtube.com/playlist?list=PL7sfndcUtXfluvXK-CsihXrxGyyIjh8n6

** ನ್ಯೂ ಎನರ್ಜಿ-ಅದ್ವೈತ ಕಾನ್ಸೆಪ್ಟ್ ಅನ್ನು ತೆಲುಗು, ಇಂಗ್ಲೀಷ್, ಕನ್ನಡ, ಹಿಂದಿ ಭಾಷೆಯಲ್ಲಿ ಓದಬೇಕೆಂದು ಬಯಸುವವರು ಈ ಲಿಂಕನ್ನು ಕ್ಲಿಕ್ ಮಾಡಿ ಓದಬಹುದು. http://darmam.com/library.html

**ಈ ಕೆಳಗಿನ ಲಿಂಕನ್ನು ಕ್ಲಿಕ್ ಮಾಡಿ ಆಡಿಯೋಗಳನ್ನು ಕೇಳಿದರೆ ಮತ್ತು ಟಾಪಿಕ್ ಗಳನ್ನು ಓದಿದರೆ ನಿಮಗೆ ನ್ಯೂ ಎನರ್ಜಿ-ಅದ್ವೈತ ಕಾನ್ಸೆಪ್ಟ್ ಸ್ಪಷ್ಟವಾಗಿ ಅರ್ಥವಾಗುತ್ತದೆ. http://darmam.com/important-topics.html